ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ಉಪ ವಿಭಾಗಗಳ ಸ್ಥಾಪನೆ

891 (1118) ಶ್ರೀ ಪ್ರಭು ಚೌವ್ಹಾಣ್ (ಔರಾದ್) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇಂಧನ ಇಲಾಖೆ ವತಿಯಿಂದ ಎಷ್ಟು ವಿದ್ಯುತ್ ಉಪ ವಿಭಾಗ (Sub Station) ಸ್ಥಾಪನೆ ಮಾಡುವಂತೆ ಕೋರಿ ಜನ ಪ್ರತಿನಿಧಿಗಳಿಂದ ಪ್ರಸ್ತಾವನೆ ಬಂದಿದೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯುತ್ ಉಪವಿಭಾಗ ಗಳನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು);

ಇ) ಗ್ರಾಮೀಣ ಜನತೆಯ ರೈತರಿಗೆ ವಿದುತ್ ಪೂರೈಕೆಯನ್ನು ಮಾಡುವಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಮತ್ತು ಆ)

ಬೀದರ್ ಜಿಲ್ಲೆಯಲ್ಲಿ ಉಪ ಕೇಂದ್ರಗಳನ್ನು (Sub Station) ಸ್ಥಾಪಿಸುವಂತೆ ಕೋರಿ ಜನ ಪ್ರತಿನಿಧಿಗಳಿಂದ ಬಂದಿರುವ ಪ್ರಸ್ತಾವನೆಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ಉಪ ವಿಭಾಗ (Sub Division) ಸ್ಥಾಪನೆಯ ಯಾವುದೇ ಪ್ರಸ್ತಾವನೆಗಳು ಜನ ಪ್ರತಿನಿಧಿಗಳಿಂದ ಬಂದಿರುವುದಿಲ್ಲ.

ಇ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿನ ಗೃಹಬಳಕೆ, ವಾಣಿಜ್ಯ, ಕುಡಿಯುವ ನೀರು ಸರಬರಾಜು ಸ್ಥಾವರಗಳು, ಗುಡಿಕೈಗಾರಿಕೆ ಮುಂತಾದ ಸ್ಥಾವರಗಳಿಗೆ ನಿರಂತರ ಹಾಗೂ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಒದಗಿಸುವ ಸಲುವಾಗಿ ಹಾಗೂ ನೀರಾವರಿ ಪಂಪುಸೆಟ್ಟುಗಳಿಗೆ ಆಶ್ವಾಸಿತ ಅವಧಿಯಲ್ಲಿ ಗುಣಮಟ್ಟದ ವಿದ್ಯುತ್ತನ್ನು ಒದಗಿಸಲು "ನಿರಂತರ ಜ್ಯೋತಿ" ಎಂಬ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾ ಗುತ್ತಿದೆ. ಈ ಯೋಜನೆಯು ಪೂರ್ಣಗೊಂಡ ನಂತರ ವಿದ್ಯುತ್ ಸರಬರಾ ಜಿನಲ್ಲಿ ಗಮನಾರ್ಹ ರೀತಿಯಲ್ಲಿ ಸುಧಾರಣೆ ಉಂಟಾಗಲಿದೆ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪ್ರಭುಚೌವಾಣ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1118ಕ್ಕೆ ಅನುಬಂಧ:-

ಕ್ರ ಸಂ.	ತಾಲ್ಲೂಕು	ವಿದ್ಯುತ್ ಉಪ ಕೇಂದ್ರದ ಸ್ಥಳ	ವೋಲ್ಟೇಜ್ ಸಾಮರ್ಥ್ಯ	ತೆಗೆದುಕೊಂಡಿರುವಕ್ರಮ
1	ಬೀದರ್	ಕಮಲಾನಗರ	110 ಕೆ.ವಿ.	ಮಂಜೂರಾತಿಯನ್ನು ನೀಡಲಾಗಿದ್ದು, 2011-12ನೇ ಸಾಲಿನ ಕ.ವಿ.ಪ್ರ.ನಿ.ನಿ.ಯ ವಾರ್ಷಿಕಯೋಜನಾಕಾಮಗಾರಿ ಪಟ್ಟಿಯಲ್ಲಿ ಒಳಗೊಂಡಿರುತ್ತದೆ.
		ಕೂಸನೂರು	110 ಕೆ.ವಿ.	ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.
		ಬಿರಾದ್	110 ಕೆ.ವಿ.	
		ವಡಗಾಂವ	33 ಕೆ.ವಿ.	
		ಮುಧೋಳ	33 ಕೆ.ವಿ.	
		ಕೌಡಗಾಂವ	33 ಕೆ.ವಿ.	ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.
2	ಬೀದರ್	ಮನ್ನಳ್ಳಿ	110 ಕೆ.ವಿ.	ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.
		ನಾಗೂರು	110 ಕೆ.ವಿ.	
		ಚಿಕ್ಕಪೇಟ್	33 ಕೆ.ವಿ.	ಜಮೀನನ್ನುಗುರುತಿಸಬೇಕಾಗಿದೆ.
3	ಬಸವಕಲ್ಯಾಣ	ಹುಲಸೂರು	110 ಕೆ.ವಿ.	ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.
4	ಭಾಲ್ಕಿ	ಆಳಂದಿ	33 ಕೆ.ವಿ.	ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.
		ನೇಳಗಿ	33 ಕೆ.ವಿ.	
		ಕುರುಬಖೇಣಗಿ	33 ಕೆ.ವಿ.	
		ಲಖ್ಖನಗಾಂವ	33 ಕೆ.ವಿ.	
		ನಿಟ್ಟೂರು	33 ಕೆ.ವಿ.	ವಿದ್ಯುತ್ ಉಪ ಕೇಂದ್ರದಕಾಮಗಾರಿಗಾಗಿಟೆಂಡರ್‌ಕರೆಯಲಾಗಿದೆ.